ಮೈಲಿಗೆಯಿಲ್ಲ ನಾಗೂ... ನನ್ನ ಪಾಲಿಗೆ ನೀನು ಯಾವತಿದ್ರೂ ಗಂಗೆ. ಜನರ ಕೊಳೆ ತೊಳೆವ, ಜಗದ ಮೈಲಿಗೆ ತೊಡೆವ ಗಂಗೆ" ಎನ್ನುತ್ತ ಹಿಂದೆ ಓಡಿದ.

ಎಷ್ಟು ದೂರ ಓಡಿದಳೋ... ಏದುಸಿರು ಬಿಡುತ್ತ ಮರದ ಬುಡಕ್ಕೆ ಒರಗಿ ಕುಳಿತಳು. ಹಿಂದೆ ಪ್ರಕಾಶ. ಅವನು ತನ್ನ ಕತೆಯನ್ನು ಹೇಳಿದರೆ ಅವಳು ತನ್ನ ಕತೆಯನ್ನು ಸಾದ್ಯಂತವಾಗಿ ವಿವರಿಸಿದಳು. ಕಾರು ಅನಾಥವಾಗಿ ನಿಂತಿತ್ತು. ಎದುರಿನಿಂದ ತಿರುವಿನಲ್ಲಿ ಶರವೇಗದಿಂದ ಬಂದ ಟಿಪ್ಪರ್ ಡಿಕ್ಕಿ ಹೊಡೆಯಿತು. ಎರಡೂ ಸೇರಿ ಉರುಳುತ್ತ ಪಕ್ಕದ ಕಮರಿಯಲ್ಲಿ ಬಿದ್ದು ಸ್ಫೋಟಗೊಂಡವು. ಒಳಗಿದ್ದವರೆಲ್ಲ ನುಜ್ಜುನುಜ್ಜಾಗಿ ಉರಿದು ಬೂದಿಯಾದರು. ಮರದ ಕೆಳಗೆ ಕತೆ ಹೇಳುತ್ತಿದ್ದ ಇಬ್ಬರ ಕಾಲುಗಳೂ ನಡುಗಿ ಎದೆ ಡವಗುಟ್ಟತೊಡಗಿತ್ತು. ಏನಾಗುತ್ತಿದೆಯೆಂದು ತಿಳಿಯುವಷ್ಟರಲ್ಲಿ ಅನಾಹುತವಾಗಿತ್ತು. ನೀರವವಾದ ಬೀದಿಯಲ್ಲಿ ಜನ ಸೇರತೊಡಗಿದರು. ಧೈರ್ಯ ತಂದುಕೊಂಡ ಪ್ರಕಾಶ ನಾಗು ಹೊದ್ದ ಶಾಲಿನಿಂದಲೇ ಅವಳ ಮುಖ ಮರೆ ಮಾಡಿದ. ಏನಾಯಿತೆಂದು ಓಡಿ ಬಂದವರಿಗೆಲ್ಲ ಅತ್ತ ಕೈ ತೋರಿದ. ಒಬ್ಬ ಟೆಂಪೋದವನಿಗೆ ಕೇಳಿಕೊಂಡು ನಾಗುವಿನೊಂದಿಗೆ ಬಸ್ ನಿಲ್ದಾಣ ಸೇರಿದ. ಆ ಊರನ್ನೇ ಬಿಟ್ಟವರು ಬೇರೆಲ್ಲೋ ನೆಮ್ಮದಿಯಿಂದ ಬದುಕ್ತಾ ಇದಾರೆ" ಎಂದು ಮೌನವಾದಳು.

ಸುಭದ್ರಮ್ಮ ಲೊಚಗುಟ್ಟುತ್ತ, "ಇದೇ ಒಂದು ಸಿನಿಮಾ ಕತೆಯಂತಿದೆಯಲ್ಲೇ... ಕಡೆಗೂ ಇಬ್ಬರೂ ಸೇರಿ ಚೆನ್ನಾಗಿರುವರಲ್ಲ... ಅಷ್ಟೇ ಸಾಕು" ಎಂದು ನೀರು ಕುಡಿದರು. ವಲ್ಲಿ ವ್ಯಂಗ್ಯವಾಗಿ ನಗುತ್ತ, "ಅಮ್ಮ, ಕೆಲವೊಮ್ಮೆ ನಿಜವಾದ ಬದುಕು ಸಿನಿಮಾಗಿಂತ ಸಿನಿಮೀಯವಾಗಿರುತ್ತದೆ. ನಂಬಲು ಸಾಧ್ಯವಿಲ್ಲದಂತೆ..." ಎಂದು ತಾನೂ ನೀರಿನ ಲೋಟವನ್ನೆತ್ತಿಕೊಂಡಳು. ಸುಭದ್ರಮ್ಮ, "ಆದರೆ... ವಲ್ಲಿ... ನಿನಗೆ ಇಷ್ಟು ವಿವರವಾಗಿ ಸಾದ್ಯಂತವಾಗಿ ಅವರ ಕತೆಯೆಲ್ಲ ಹೇಗೆ ಗೊತ್ತು? ಹೊರ ಜಗತ್ತಿಗೇಕೆ ತಿಳಿಯಲಿಲ್ಲ? ಅವರ ಜೀವನದಲ್ಲಿ ನೀನೆಲ್ಲಿದ್ದೆ? ಏನಾಗಿದ್ದೆ?" ಎಂದು ಕುತೂಹಲದಿಂದ ಕೇಳಿದರು. ವಲ್ಲಿ ನಸುನಗುತ್ತ, "ನಂಬುವದೇ ಕಷ್ಟ ಅಂತೀರಾ. ಆದರೆ ಎಲ್ಲ ನೂರಕ್ಕೆ ನೂರು ನಿಜವಮ್ಮ. ಏಕೆಂದರೆ ಆ... ಆ... ನಾಗು ನಾನೇ. ಪ್ರಕಾಶನೇ ತಂಗವೇಲು. ನಾವಿಬ್ಬರೂ ಓಡಿ ಬಂದಿದ್ದು ಕುಂಭಕೋಣಕ್ಕೆ. ಪ್ರಕಾಶನ ಸ್ನೇಹಿತನ ಬಳಿಗೆ. ಅವನೂ ಎಲ್ಲ ಕೇಳಿ 'ಚಿಂತಿಸಬೇಡಿ' ಎಂದು ಕನ್ನಡ ಸಂಸಾರವಾದ ನಿಮ್ಮ ಬಳಿಗೆ ಕೆಲಸಕ್ಕೆ ಸೇರಿಸಿದ. ಅವನು ತಂಗವೇಲುವಾದರೆ ನಾನು ವಲ್ಲಿಯಾದೆ. ಅಂದಿನಿಂದ ಆನಂದವಾಗಿದ್ದೇವೆ. ಉಪ್ಪೊ... ಉಪ್ಪಿನಕಾಯಿಯನ್ನೋ ನಂಜಿಕೊಂಡು. ತಾರೆಯ ಬದುಕನ್ನೆಂದೋ ಮರೆತುಬಿಟ್ಟಿದ್ದೇನೆ. ನೀವೂ ಯಾರಲ್ಲೂ ಹೇಳಬೇಡಿ. ನಾನು ಈಗ ಬದುಕುವ ಅಭಿನಯ ಬಿಟ್ಟು ನಿಜವಾಗಿ ಬದುಕುತ್ತಿದ್ದೇನೆ. ಎಷ್ಟೋ ಜನ ಸೇರಿ ಹಾಳು ಮಾಡಿದ ನನ್ನ ಬದುಕೆಂಬ ರಂಗವಲ್ಲಿಯನ್ನು ಈಗ ಸರಿಪಡಿಸಿಕೊಳ್ಳುತ್ತಿದ್ದೇನೆ. ನೀವು ನೋಡುತ್ತಿರುವಂತೆ ತಂಗವೇಲು ನನ್ನನ್ನ ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾನೆ. ಇನ್ನೂ ಮದುವೆಯಾಗಲಿಲ್ಲ ಎಂಬುದೊಂದೇ ಕೊರತೆ. ಒಂದು ಚಿನ್ನದ ಮಾಂಗಲ್ಯ ಮಾಡಿಸಿ ತರ್ತೀನಿಂತ ಹೇಳಿದಾನೆ. ಆದರೆ ಸಂಭ್ರಮದಿಂದ ಮದುವೆಯಾಗಲು ಹೋಗಿ ಯಾರಿಗಾದರೂ ನನ್ನ ಬಗ್ಗೆ ತಿಳಿದರೆ ಅರಸಿಕೊಂಡು ಬಂದು ಮತ್ತೆ ಬೆಂಕಿಗೆ ನೂಕುತ್ತಾರೇಂತ ಭಯ. ಅದಕ್ಕೆ ಹಾಗೇ... ಇದ್ದುಬಿಟ್ಟಿದೀವಿ. ಆದರೆ ನಾನೀಗ... ಅವನ ಮಗುವಿಗೆ ತಾಯಾಗ್ತಾ ಇದೀನಮ್ಮ" ಎಂದು ನಾಚಿಕೆಯಿಂದ ಸೆರಗೆಳೆದುಕೊಂಡಳು.

ಬೆರಗಾಗಿ ಬಾಯ್ದೆರೆದು ಕುಳಿತ ಸುಭದ್ರಮ್ಮನ ಕಂಗಳು ತುಂಬಿ ಬಂದಿದ್ದವು. ನಿಜ, ಅದೇ